### ಬೆಳ್ಳಂದೂರು- ವರ್ತೂರು ಕೆರೆ ಪ್ರದೇಶದಲ್ಲಿ ಆತಂಕ | ಐಐಎಸ್ಸಿ ಅಧ್ಯಯನ ವರದಿ ಎಚ್ಚರಿಕೆ

# ಕೆರೆಗಳ ಬಫರ್ ವಲಯ ಗರಿಷ್ಠ ಒತ್ತುವರಿ

■ **ಆರ್.ತುಳಸಿಕುಮಾರ್** ಬೆಂಗಳೂರು

ಬೆಳ್ಳಂದೂರು ಕೆರೆ ಹಾಗೂ ವರ್ತೂರು ಕೆರೆಯ ಸುತ್ತಲಿನ ಬಫರ್ ವಲಯ ಅತಿ ಹೆಚ್ಚು ಒತ್ತುವರಿಗೆ ಒಳಗಾಗಿದ್ದು, ತಕ್ಷಣವೇ ಉಪಕ್ರಮ ಕೈಗೊಳ್ಳದಿದ್ದಲ್ಲಿ ಆ ಭಾಗದಲ್ಲಿ ಪ್ರವಾಹ, ಅಂತರ್ಜಲ ಕುಸಿತ ಉಂಟಾಗಲಿದೆ ಎಂದು ಐಐಎಸ್ಸಿಯ ಅಧ್ಯಯನ ವರದಿ ಎಚ್ಚರಿಕೆ ನೀಡಿದೆ.

ನಗರೀಕರಣದಿಂದಾಗಿ ಮಹಾನಗರದ ಜಲತಾಣ ಹಾಗೂ ಪರಿಸರ ಪ್ರದೇಶದ ವ್ಯಾಪ್ತಿ ಕುಗ್ಗುತ್ತಿದೆ. ಬಫರ್ ವಲಯದಲ್ಲಿ ಕಟ್ಟಡಗಳ ನಿರ್ಮಾಣದಿಂದ ರಾಜಕಾಲುವೆಗಳು ಒತ್ತುವರಿಗೆ ಒಳಗಾಗಿದೆ. ಇದು ಮಳೆಗಾಲುವೆಗಳ ಹರಿವಿಗೂ ಅಡ್ಡಿಯುಂಟು ಮಾಡಿದ್ದು, ಪ್ರವಾಹದ ಅನಾಹುತಕ್ಕೆ ಆಸ್ಪದ ನೀಡಿವೆ. ಇಷ್ಟಾದರೂ ಕೆರೆ, ಕಾಲುವೆಗಳ ಸಂರಕ್ಷಣೆಗೆ ಆಡಳಿತಗಾರರು ನಿಖರ ಪರಿಹಾರ ಒದಗಿಸದಿರುವುದು ಸಮಸ್ಯೆಯನ್ನು ಜೀವಂತ ಇಟ್ಟಿದೆ ಎಂದು ವರದಿ ಬೊಟ್ಟು ಮಾಡಿದೆ.

ಐಐಎಸ್ಸಿ ವಿಜ್ಞಾನಿ ಟಿ.ವಿ.ರಾಮಚಂದ್ರ ನೇತೃತ್ವದ ತಂಡವು ನಡೆಸಿದ ಅಧ್ಯಯನದಲ್ಲಿ 2002ರಿಂದ 20018ರ ವರೆಗಿನ ಅವಧಿವರೆಗೆ ಆಗಿರುವ ಬದಲಾವಣೆ, ಅದರ ಪರಿಣಾಮಗಳ ಕುರಿತು ಅಂಕಿ-ಅಂಶ ಒಳಗೊಂಡ ವರದಿಯು ನಗರದ ಕೆರೆಗಳು, ರಾಜಕಾಲುವೆ, ಬಫರ್ ವಲಯ ಹಾಗೂ ನಾಲ್ಕೂ ಕಣಿವೆ ಪ್ರದೇಶಗಳು ಅತಿ ಅಪಾಯಕ್ಕೆ ಒಳಗಾಗಿರುವುದು ದೃಢಪಟ್ಟಿದೆ.

ಎನ್‌ಜಿಟಿ ಆದೇಶದ ಹಿನ್ನೆಲೆಯಲ್ಲಿ ಕೆರೆಗಳ ಬಫರ್ ವಲಯ ಮಿತಿಯು 75 ಮೀ.ಗೆ ನಿಗದಿಯಾಗಿದ್ದು, ಆ ಭಾಗವು ಸಂರಕ್ಷಣೆಯಾಗದೆ ಪರಿಸರೇತರ ಕಾರ್ಯಕ್ಕೆ ಬಳಕೆಯಾಗುತ್ತಿದೆ.

»II



**ವಿಜಯ ಕರ್ನಾಟಕ Exclusive**

**ಪರಿಸರ ಸಂರಕ್ಷಣೆಗೆ ಗಮನ ನೀಡದಿದ್ದಲ್ಲಿ ಮತ್ತಷ್ಟು ಅಪಾಯ**

## ಗ್ರಾಮ ನಕ್ಷೆಯಿಂದ ಒತ್ತುವರಿ ದೃಢ

ಬೆಳ್ಳಂದೂರು, ವರ್ತೂರು ಕೆರೆ, ರಾಜಕಾಲುವೆ, ಬಫರ್ ವಲಯ ವ್ಯಾಪ್ತಿಯಲ್ಲಿ ಒತ್ತುವರಿ ಆಗಿರುವುದನ್ನು ದೃಢಪಡಿಸಿಕೊಳ್ಳಲು ಸ್ಯಾಟಲೈಟ್ ರಿಮೋಟ್ ಸೆನ್ಸಿಂಗ್ ನೆರವು ಪಡೆಯಲಾಗಿದೆ. ಇದಕ್ಕೆ ಮುಖ್ಯ ಆಧಾರವಾಗಿ 1904ರ ಗ್ರಾಮ ನಕ್ಷೆಯಲ್ಲಿ ನಮೂದಿಸಿರುವ ಸರ್ವೆ ನಂಬರ್ ಹಾಗೂ ಇತ್ಯಾದಿ ಮಾಹಿತಿಯನ್ನು ಪಡೆಯಲಾಗಿದೆ.